ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಶುಕ್ರವಾರ ೨೦ನೇ ಜನವರಿ ೧೯೮೪

Friday, 20th January, 1984

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಪೂರ್ವಾಹ್ನ ೧೧-೦೦ಘಂಟೆಗೆ ಸಮಾವೇಶಗೊಂಡಿತು.

The House met in the Assembly Chamber, Vidhana Soudha, at Eleven of the Clock.

ಅಧ್ಯಕ್ಷರು (ಶ್ರೀ ಡಿ. ಬಿ. ಚಂದ್ರೇಗೌಡ ಅವರು) ಪೀಠವನ್ನು ಅಲಂಕರಿಸಿದರು.

MR. SPEAKER (SRI D. B. CHANDRE GOWDA) in the Chair.

ಸಂತಾಪ ಸೂಚನೆ

ಅಧ್ಯಕ್ಷರು.—ಈ ಕೆಳಕಂಡ ಮಾಜಿ ಸದಸ್ಯರುಗಳು ನಿಧನರಾದರೆಂದು ಈ ಸಭೆಗೆ ತಿಳಿಸಲು ವಿಷಾದಿಸುತ್ತೇನೆ.

(೧) ಶ್ರೀ ಎ. ರಾಮಚಂದ್ರ, ಮಾಜಿ ವಿಧಾನಸಭಾ ಸದಸ್ಯರು, ದಿನಾಂಕ ೭ನೇ ನವೆಂಬರ್ ೧೯೮೩ರಂದು ನಿಧನರಾದರು. ಅವರು ನಾಲ್ಕನೆಯ ಹಾಗೂ ಆರನೆಯ ಸಾರ್ವತ್ರಿಕ ಚುನಾವಣೆಗಳಲ್ಲಿ ಸೂಳ್ಯ ಕ್ಷೇತ್ರದಿಂದ ವಿಧಾನಸಭೆಗೆ ಆಯ್ಕೆಯಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ.

(೨) ಶ್ರೀ ಕೆ. ಸುಬ್ರಹ್ಮಣ್ಯಗೌಡ, ಮಾಜಿ ವಿಧಾನಸಭಾ ಸದಸ್ಯರು, ದಿನಾಂಕ ೯ನೇ ಜನವರಿ ೧೯೮೪ರಂದು ನಿಧನರಾದರು. ಅವರು ಐದನೆಯ ಸಾರ್ವತ್ರಿಕ ಚುನಾವಣೆಯಲ್ಲಿ ಬೆಳ್ತಂಗಡಿ ಕ್ಷೇತ್ರದಿಂದ ವಿಧಾನಸಭೆಗೆ ಆಯ್ಕೆಯಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ.

ನಿಧನ ಹೊಂದಿದ ಸದಸ್ಯರ ಗೌರವಾರ್ಥವಾಗಿ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಸಭೆ ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಿತು)

ಅಧ್ಯಕ್ಷರು.—ಈ ಸಭೆಯಲ್ಲಿ ಅಂಗೀಕರಿಸಿದ ಸಂತಾಪ ಸೂಚನೆಯನ್ನು ಅಗಲಿದ ಸದಸ್ಯರುಗಳ ಕುಟುಂಬದವರಿಗೆ ಕಳುಹಿಸಲಾಗುವುದು.